ಏನಾದರೂ ಮಾಡಿದರೆ ತೆಂಗಿನ ಬೆಳೆ ಉಳಿಯುತ್ತದೆ. ಇಲ್ಲವೆಂದರೆ ಉಳಿಯುವ ಹಾಗಿಲ್ಲ. ಇದರ ಬಗ್ಗೆ ತಾವು ನೋಡಿದರೆ ಗೊತ್ತಾಗುತ್ತದೆ. ಒಂದು ಸಲ ತಾವು ನಮ್ಮ ಕಡೆ ಬರುವ ಕೃಪೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಸನ್ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿ ಮತ್ತು ತುಮಕೂರು ಭಾಗದಲ್ಲಿ ಹೆಚ್ಚು ಕೆಲಸ ಮಾಡುತ್ತಿದ್ದೇವೆ. ಔಷಧಿಯನ್ನು ಕೂಡಾ ಕೊಟ್ಟಿದ್ದೇವೆ. ವ್ಯಾಪಕವಾಗಿ ಕೂಡಾ ನಾವು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಅಸೆಂಬ್ಲಿ ಕಳೆದ ಮರುದಿನವೆ ಆ ಭಾಗಕ್ಕೆ ಹೋಗೋಣ.

ಶ್ರೀ ಜಿ.ಎಸ್. ಶಿವನಂಜಪ್ಪ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಯವೆರು ಹೋದ ತಿಂಗಳು 6ನೇ ತಾರೀಖು ತುಮಕೂರಿಗೆ ಬಂದಿದ್ದರು. ಅಲ್ಲಿ ಅಧಿಕಾರಿಗಳನ್ನು ಕರೆಯಿಸಿ ಎದುರಿಗೆ ಹೇಳಿದರು. ಅಧಿಕಾರಿಗಳು ಇದಕ್ಕೆ ಜಪ್ಪೆ ಅಂತಾ ಅನ್ನಲಿಲ್ಲ. ಇಡೀ ತುಮಕೂರು ಜಿಲ್ಲೆಯಲ್ಲಿ ಈ ರೋಗ ಹರಡಿದೆ. ಸಮರೋಪಾದಿಯಲ್ಲಿ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಕೆಲಸ ಮಾಡದೇ ಇದ್ದವರನ್ನು ಸಸ್ಪೆಂಡ್ ಮಾಡುತ್ತೇವೆಂದು ಹೇಳಿದರು, ಏನೂ ಆಗಿಲ್ಲ. ಸಮರ ಮೊದಲೇ ಇಲ್ಲ. ದಯಮಾಡಿ ಇದರ ಬಗ್ಗೆ ಸೀರಿಯಸ್ ಆಗಿ ಗಮನ ಹರಿಸಬೇಕು. ಇಲ್ಲದಿದ್ದರೆ ರೈತರು ಹಾಳಾಗಿ ಹೋಗುತ್ತಾರೆ. ಇದಕ್ಕೆ ಏನಾದರೂ ಒಂದು ಉಪಾಯ ಕಂಡುಹಿಡಿಯಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಅಸೆಂಬ್ಲಿಯಲ್ಲಿ ನನ್ನ ಕೊಶ್ಚನ್ ಮುಗಿದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾನ್ಯ ಸದಸ್ಯರುಗಳ ಸಮ್ಮುಖದಲ್ಲೇ ಅದರ ಬಗ್ಗೆ ಪರಿಹಾರ ಕಂಡುಹಿಡಿಯುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಅಧ್ಯಕ್ಷರೆ, ಈ ಕಪ್ಪು ತಲೆ ಹುಳುವಿನ ರೋಗ ಕರ್ನಾಟಕದಲ್ಲಿ ಎಷ್ಟು ಪ್ರದೇಶದಲ್ಲಿ ಹರಡಿದೆ? ಮತ್ತು ತಾವು ಸಮರೋಪಾದಿಯಲ್ಲಿ ಎಂದು ಪ್ರತಿ ಪದದಲ್ಲಿ ಹೇಳುತ್ತಿದ್ದೀರಿ. ನಿಮ್ಮ ಸರ್ಕಾರದಲ್ಲಿ ಎಷ್ಟು ಜನ ಸೈನಿಕರಿದ್ದಾರೆ? ಎಲ್ಲೆಲ್ಲಿ ಯುದ್ಧಕ್ಕೆ ಎಷ್ಟೆಷ್ಟು ಜನ ಹೋಗಿದ್ದಾರೆ?

ಅಧ್ಯಕ್ಷರು : ಸರ್ಕಾರದಲ್ಲಿ ಎಷ್ಟು ಸೈನಿಕರಿದ್ದಾರೆ, ಎಷ್ಟು ಶತ್ರುಗಳಿದ್ದಾರೆಂದು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಸಮರೋಪಾದಿಯಲ್ಲಿ ಎಂದು ಹೇಳುವುದಕ್ಕೆ ನಿಮ್ಮ ಹತ್ತಿರ ಎಷ್ಟು ಮದ್ದು ಗುಂಡು ಇವೆ?

ಅಧ್ಯಕ್ಷರು : ಸಮರೋಪಾದಿ ಎಂದು ಹೇಳಿಲ್ಲ. ಸಮರ ಸಿದ್ಧತೆಯಲ್ಲಿ ಎಂದು ಹೇಳಿದ್ದಾರೆ. ಸಿದ್ದತೆ ಮಾಡಿಕೊಂಡಿದ್ದಾರೆ. ಅಸೆಂಬ್ಲಿ ಆದ ತಕ್ಷಣ ಅವರು ಹೊರಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಯವರೆಗೆ ಶತ್ರುಗಳು ಆಕ್ರಮಣ ಮಾಡುತ್ತಾರೆ. ಅವರು ಹೋಗೋ ಹೊತ್ತಿಗೆ ಊರೆಲ್ಲಾ ಬೆಂಕಿ ಬಿದ್ದಿರುತ್ತದೆ. ಬೆಂಕಿ ಬಿದ್ದಮೇಲೆ ಬಾವಿ ತೋಡಿದರು ಅನ್ನೋ ಹಾಗಾಗುತ್ತದೆ.

ಅಧ್ಯಕ್ಷರು : ನಿಮ್ಮನ್ನೂ ಕರೆಯುತ್ತಾರೆ, ನಾಳೆ ಮೀಟಿಂಗ್‌ಗೆ.

ಬಸವನಹಳ್ಳಿ ಪಂಚಾಯಿತಿಯಲ್ಲಿ ಭೂಮಿ ಪರಿವರ್ತನೆ

1254 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಬಸವನಹಳ್ಳಿ ಮಂಡಲ್ ಪಂಚಾಯತಿ ವ್ಯಾಪ್ತಿಯಲ್ಲಿ 1988 ರಿಂದ 1991ರ ಜನವರಿವರೆಗೆ ಎಷ್ಟು ಎಕರೆಗೆ ಜಮೀನು ಭೂ ಪರಿವರ್ತನೆಗೆ ಮಂಜೂರಾತಿ ಮಾಡಲಾಗಿದೆ.*

ಆ) ಈ ರೀತಿ ಭೂ ಪರಿವರ್ತನೆಯಿಂದ ಮೇಲ್ಕಂಡ ಪಂಚಾಯ್ತಿಗೆ ಎಷ್ಟು ಆದಾಯ ಬಂದಿದೆ ಮತ್ತು ವ್ಯಾಪಕ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಮೇಲ್ಕಂಡ ಪಂಚಾಯ್ತಿ ವ್ಯಾಪ್ತಿಗೆ ಬರುವ ಅರಿಶಿನಕುಂಟೆ ಗ್ರಾಮದಲ್ಲಿ 'ಆದರ್ಶನಗರ' ಎಂಬ ಬಡಾವಣೆಗೆ ಎಷ್ಟು ಎಕರೆ ಜಮೀನು ಪರಿವರ್ತನೆ ಮಾಡಲಾಗಿದೆ;

ಈ) ಮೇಲ್ಕಂಡ ಬಡಾವಣೆ ಮಾಲೀಕರು ಪಕ್ಕದಲ್ಲಿದ್ದ ಸರ್ಕಾರಿ ಗೋಮಾಳದಲ್ಲಿ ಸುಮಾರು ಹದಿನಾಲ್ಕು ಎಕರೆ ಜಮೀನನ್ನು ಅತಿಕ್ರಮವಾಗಿ ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಮೇಲ್ಕಂಡ ಪಂಚಾಯಿತಿಯಲ್ಲಿ ಪರಿವರ್ತನೆ ಆಗಿರುವ ಜಾಗ ಹಾಗೂ ಅನೇಕ ನಾಗರೀಕ ಸೌಲಭ್ಯಗಳಿಗೆ ಮೀಸಲಿಟ್ಟ ನಿವೇಶನಗಳನ್ನು ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿ ಬೇರೆಯವರ ಹೆಸರಿಗೆ ಖಾತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಮೇಲ್ಕಂಡ ಅರಿಶಿನಕುಂಟೆ ಗ್ರಾಮದಲ್ಲಿ ಕೆಲವು ದಾನಿಗಳು ವಿದ್ಯಾ ಇಲಾಖೆಗೆ ದಾನವಾಗಿ ಕೊಟ್ಟಿದ್ದ ಜಮೀನಗಳನ್ನು ಮೇಲ್ಕಂಡ 'ಆದರ್ಶನಗರ'ದ ಮಾಲೀಕರುಗಳು ನಾಗರೀಕ ಸೌಲಭ್ಯಕ್ಕೆ ಬಿಟ್ಟಿರುವ ಹಾಗೆ ತೋರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಸವಿಸ್ತಾರವಾದ ತನಿಖೆ ನಡೆಸಿ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಕ್ರಮಕೈಗೊಳ್ಳುವುದೇ?

ಶ್ರೀ. ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು) :

ಅ) 316 ಎಕರೆ 25 ಗುಂಟೆಗಳು.

ಆ) ರೂ. 10,13,762-50 ಪೈಸೆಗಳು. ಯಾವುದೇ ರೀತಿಯ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಆದರ್ಶನಗರ ಬಡಾವಣೆಗೆ ಎಂದು ಯಾವ ಪ್ರಕರಣದಲ್ಲೂ ಭೂ ಪರಿವರ್ತನೆ ಮಾಡಿಲ್ಲ.

ಈ) ಸರದಿಯವರು ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ.

ಉ) ಯಾವುದೇ ನಾಗರೀಕ ಸೌಲಭ್ಯಗಳಿಗೆ ಬಿಟ್ಟಿರುವ ಅಥವಾ ಮೀಸಲಿಟ್ಟಿರುವ ಜಾಗಗಳನ್ನು ಖಾತೆ ಮಾಡಿರುವುದಿಲ್ಲ.

ಊ) ದಾನಿಗಳು ಕೊಟ್ಟಿರುವ ಜಾಗವನ್ನು ಶಾಲೆಯ ಮೈದಾನಕ್ಕಾಗಿ ಬಿಡಲಾಗಿದೆ.

ಋ) ಈ ವಿಚಾರವಾಗಿ ಮಂಡಲ ಪಂಚಾಯತಿಗಾಗಲೀ ಅಥವಾ ಸರ್ಕಾರಕ್ಕಾಗಲೀ ದೂರು ಬಂದಲ್ಲಿ ಕಾನೂನು ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಅಂಜನಮೂರ್ತಿ : ಮಾನ್ಯ ಸಭಾಧ್ಯಕ್ಷರೇ, ಮೊದಲನೇ ಪ್ರಶ್ನೆ ಮತ್ತು ಉಪ ಪ್ರಶ್ನೆ ಒಟ್ಟು ಆರು ಪ್ರಶ್ನೆಗಳನ್ನು ನಾನು ಕೇಳಿದ್ದೇನೆ. ಆರು ಪ್ರಶ್ನೆಗಳಿಗೂ ಅವರು ಉತ್ತರ ಒದಗಿಸಿದ್ದಾರೆ. ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಕಂದಾಯ ಅಧಿಕಾರಿಗಳು ಸುಳ್ಳು ಮಾಹಿತಿ ಕೊಟ್ಟಿದ್ದಾರೆ ಎಂದು. ಮಾನ್ಯ ಕಂದಾಯ ಸಚಿವರು ಅದನ್ನು ಗಿಳಿ ಪಾಠ ಒಪ್ಪಿಸುವ ರೀತಿಯಲ್ಲಿ ಒಪ್ಪಿಸಿದ್ದಾರೆ. ನಾನು ಯಾಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ನಾನು ಕೇಳಿರುವಂತಹ ಮೊದಲನೆ ಪ್ರಶ್ನೆ ಈ ರೀತಿ ಇದೆ : ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಬಸವನಹಳ್ಳಿ ಮಂಡಲ್ ಪಂಚಾಯಿತಿ ವ್ಯಾಪ್ತಿಯಲ್ಲಿ 1988ರಿಂದ 1991ರಲ್ಲಿ ಜನವರಿವರೆಗೆ ಎಷ್ಟು

ಎಕರೆ ಜಮೀನು ಭೂ ಪರಿವರ್ತನೆಗೆ ಮಂಜೂರಾತಿ ಮಾಡಲಾಗಿದೆ ಎಂದು ಕೇಳಿದ್ದೆ. ಹಾಗೂ ಅಲ್ಲಿ ಬಹಳಷ್ಟು ಅವ್ಯವಹಾರ ನಡೆದಿದೆ ಎಂದು ಹೇಳಿದ್ದೆ. ಅದಕ್ಕೆ ಉತ್ತರವಾಗಿ ಅವರು 316 ಎಕರೆ 25 ಗುಂಟೆ ಎಂದು ಹೇಳಿದ್ದಾರೆ. ಸರ್ಕಾರಕ್ಕೆ ಯಾವುದೇ ವಿಧವಾದ ಒಂದೂ ಕಂಪ್ಲೈಂಟ್ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ನಾನು ಹೇಳುತ್ತಿದ್ದೇನೆ ಈ ಭೂಮಿ ಪರಿವರ್ತನೆ ಕಾಯಿದೆ ಪ್ರಕಾರ ಒಟ್ಟು 40 ಪರ್ಸೆಂಟ್ ಜಮೀನು ಬಿಡಬೇಕು. ರೋಡಿಗೆ ಮತ್ತು ಸಿ.ಎ. ಸೈಟಿಗೆ. ಈ ರೀತಿ ಏನಾದರೂ ಬಿಟ್ಟಿದ್ದಾರೆಯೇ ಮತ್ತು ಏನೂ ಅವ್ಯವಹಾರ ಗಮನಕ್ಕೆ ಬಂದಿಲ್ಲ, ಭೂಮಿಯನ್ನು ಎನ್‌ಕ್ರೋಜ್ ಮಾಡಿಲ್ಲ ಎಂದು ಹೇಳುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಅಪ್ರೂವ್ಡ್ ಪ್ಲಾನ್ ನೋಡಿಬಿಟ್ಟು ಏನಾದರೂ ವರದಿ ಕೊಟ್ಟಿದ್ದಾರಾ? ಈ ತಹಶೀಲ್ದಾರ್ ಆಫೀಸ್ ಮತ್ತು ಪಂಚಾಯತಿ ಆಫೀಸ್ ನನ್ನ ಮನೆಯ ಪಕ್ಕದಲ್ಲಿಯೇ ಇರುವುದು. ಕಳೆದ ಆರು ದಿವಸಗಳ ಹಿಂದೆ ಪಂಚಾಯತಿ ಸೆಕ್ರೆಟರಿ ಅವರನ್ನು ತಹಶೀಲ್ದಾರ್‌ರವರು ಕರೆದು ಕೇಳಿದರು - ಅಸೆಂಬ್ಲಿ ಪ್ರಶ್ನೆ ಬಂದಿದೆ, ಏನಾದರೂ ಅವ್ಯವಹಾರ ಮಾಡಿದ್ದೀರಾ ಎಂದು. ಏನೂ ಇಲ್ಲ ಎಂದರು, ಅದೇ ರೀತಿ ಇವರು ಉತ್ತರ ಕೊಟ್ಟಿದ್ದಾರೆ. ಇಲ್ಲಿ ಆದರ್ಶ ನಗರದಲ್ಲಿ ಸುಮಾರು 85 ಎಕರೆ ಭೂಮಿಯನ್ನು ಪರಿವರ್ತನೆ ಮಾಡಿಕೊಂಡಿದ್ದಾರೆ. ಆದರ್ಶ ನಗರದಲ್ಲಿ ಯಾವ ಭೂ ಪರಿವರ್ತನೆ ಮಾಡಿಲ್ಲ ಎಂದು ಇವರು ಹೇಳುತ್ತಾರೆ. ನ್ಯಾಶನಲ್ ಹೈವೇ ಪಕ್ಕದಲ್ಲಿ ಸುಮಾರು ಒಂದು ಕಿಲೋ ಮೀಟರ್ ದೂರು ಕಾಣುತ್ತದೆ. ಇವರು ಹಾಕಿರುವ ಬೋರ್ಡ್ 'ಆದರ್ಶ ನಗರ' ಎಂದು. ಆ ಬಡಾವಣೆಯಲ್ಲಿ ಯಾವ ಭೂ ಪರಿವರ್ತನೆ ಮಾಡಿಲ್ಲ ಎಂದು ಹೇಳುತ್ತಾರೆ.

ಆದರೆ ಅವರು ಅಲ್ಲಿ ಸುಮಾರು ಮೂರು ಎಕರೆ ಜಾಗವನ್ನು ಸ್ಕೂಲಿಗೋಸ್ಕರ ಡೊನೇಟ್ ಮಾಡಿದೆ. ಜಾಗವನ್ನು ಸಿ.ಎ. ಸೈಟ್ ಎಂದು ತೋರಿಸಿದ್ದಾರೆ. ಅದನ್ನು ಯಾವ ಪ್ಲಾನ್‌ಗಾಗಲೀ ಅಥವಾ ಎಸ್ಟಿಮೇಟ್ ಆಗಲೀ ನೋಡದೆ ಹಾಗೆ ಏನೂ ಮಾಡಿಲ್ಲ ಎಂದು ಹೇಳಿದ್ದಾರೆ. ಸುಮಾರು 14.5 ಎಕರೆ ಸರ್ವೆ ನಂಬರ್ 33 ಮತ್ತು 62ರಲ್ಲಿ ಫೆನ್ಸಿಂಗ್ ಹಾಕಿದ್ದಾರೆ. ಅಲ್ಲಿ ಏನೂ ಮಾಡಿಲ್ಲ ಎಂದು ಇವರು ಹೇಳುತ್ತಾ ಇದ್ದಾರೆ. ಆದ್ದರಿಂದ ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಪೂರ್ಣ ಪ್ರಮಾಣದ ತನಿಖೆ ನಡೆಯಬೇಕು ಎಂದು. ತನಿಖೆಯಲ್ಲಿ ಏನೂ ತಪ್ಪು ಇಲ್ಲ ಎಂದರೆ ಸಭಾಧ್ಯಕ್ಷರು ತಾವು ಏನು ಶಿಕ್ಷೆ ಕೊಡುತ್ತೀರೋ ಅದನ್ನು ಅನುಭವಿಸುವುದಕ್ಕೆ ನಾನು ರೆಡಿಯಾಗಿದ್ದೇನೆ. ದಯಮಾಡಿ ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವ್ಯಕ್ತಿಗಳು ಪ್ರಭಾವೀ ವ್ಯಕ್ತಿಗಳಾಗಿದ್ದಾರೆ. ಯಾರಿಗೆ ಬೇಕಾದರೂ ಮ್ಯಾನಿಪ್ಯುಲೇಟ್ ಮಾಡುವಂತಹ ವ್ಯಕ್ತಿಗಳು. ಬಡವರ, ರೈತರ, ತೆರಿಗೆಗಾರರ ಜಮೀನನ್ನು ಇವರು ಒತ್ತುವರಿ ಮಾಡಿಕೊಂಡು ಬೇಕಾದಷ್ಟು ಅನ್ಯಾಯವನ್ನು ಮಾಡುತ್ತಿದ್ದಾರೆ. ದಯವಿಟ್ಟು ಸರ್ಕಾರ ಸೂಕ್ತ ಆದೇಶವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ನಾನು ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆ. ಆದರೆ ಅವರಿಗೆ ಸಮಾಧಾನಕರ ಆಗಿಲ್ಲ ಎಂದು ಹೇಳಿದ್ದಾರೆ. ಬೇರೆ ಇಲಾಖೆಯ ಉತ್ತರ ನನ್ನ ವತಿಯಿಂದ ಸಿಗಬೇಕು ಎಂದರೆ ಅದು ಸಾಧ್ಯ ಇಲ್ಲ. ಯಾಕೆಂದರೆ ಕಂಟ್ರಿ ಟೌನ್ ಪ್ಲಾನ್ ಆಕ್ಟ್ ಪ್ರಕಾರ ಫ್ಲಾಟ್ಸ್‌ಗಳನ್ನು ಎಷ್ಟು ಮಾಡಬೇಕು, ಎಷ್ಟು ರೋಡ್ ಬಿಡಬೇಕು, ಏನು ಮಾಡಬೇಕು ಎನ್ನತಕ್ಕದ್ದು ಮಂಡಲ್ ಪಂಚಾಯತ್‌ಗೆ ಬರುತ್ತದೆ. ಅದರ ಪ್ರಕಾರ ಆಗುತ್ತದೆ. ಈ ಮಂಡಲ್ ಪಂಚಾಯತ್‌ನವರು ಆಕ್ಷೇಪಣೆ ತೆಗೆದುಕೊಳ್ಳಬೇಕು ಅಥವಾ ಲೇಔಟ್ ಅಪ್ರೂವ್ ಮಾಡಬೇಕು ಅಥವಾ ಬಿಡಬೇಕು ಎನ್ನತಕ್ಕದ್ದು ಇದೆ. ಕನ್‌ವರ್ಷನ್

ಎಷ್ಟು ಆಗಿದೆ ಎಂದು ಕೇಳಿದ್ದಾರೆ. ಅವರ ಮೂಲ ಪ್ರಶ್ನೆಯನ್ನು ನಾನು ಓದುತ್ತೇನೆ. 'ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಬಸವನಹಳ್ಳಿ ಮಂಡಲ್ ಪಂಚಾಯತಿ ವ್ಯಾಪ್ತಿಯಲ್ಲಿ 1988ರಿಂದ 1991ರ ಜನವರಿಯವರೆಗೆ ಎಷ್ಟು ಎಕರೆ ಜಮೀನು ಭೂ ಪರಿವರ್ತನೆಗೆ, ಮಂಜೂರಾತಿ ಮಾಡಲಾಗಿದೆ' ಎಂದು ಕೇಳಿದ್ದಾರೆ. ನನ್ನ ಉತ್ತರ ಇಷ್ಟೇ '316 ಎಕರೆ 25 ಗುಂಟೆಗಳು ಎಂದು. ಇದರಲ್ಲಿ ಏನು ತಪ್ಪು ಇದೆ? ಎಷ್ಟು ಕನ್‌ವರ್ಷನ್ ಮಾಡಿದ್ದಾರೆ ಎಂದು ಕೇಳಿದ್ದರು, ಇಷ್ಟು ಕನ್‌ವರ್ಷನ್ ಆಗಿದೆ ಎಂದು ಹೇಳಿದೆ. ಎರಡನೆಯದಾಗಿ ಈ ರೀತಿ ಭೂ ಪರಿವರ್ತನೆಯಿಂದ ಮೇಲ್ಕಂಡ ಪಂಚಾಯತಿಗೆ ಎಷ್ಟು ಆದಾಯ ಬಂದಿದೆ ಎಂದು ಕೇಳಿದ್ದಾರೆ. ನಾನು ಉತ್ತರ ರೂಪವಾಗಿ ರೂ. 10,13,762.50ಪೈಸೆಗಳು ಎಂದು ತಿಳಿಸಿದ್ದೇನೆ. ಮೂರನೆಯದಾಗಿ ಮೇಲ್ಕಂಡ ಪಂಚಾಯತಿ ವ್ಯಾಪ್ತಿಗೆ ಬರುವ ಅರಿಶಿನಕುಂಟೆ ಗ್ರಾಮದಲ್ಲಿ ಆದರ್ಶನಗರ ಎಂಬ ಬ್ಲಡಾವಣೆಗೆ ಎಷ್ಟು ಎಕರೆ ಜಮೀನು ಪರಿವರ್ತನೆ ಮಾಡಲಾಗಿದೆ ಎಂದು ಕೇಳಿದ್ದಾರೆ. ಇದರ ಬಗ್ಗೆ ನಾವು ಹೇಳಿದ್ದೇವೆ 'ಆದರ್ಶ ನಗರ ಬಡಾವಣೆಗೆ ಎಂದು ಯಾವ ಪ್ರಕರಣದಲ್ಲೂ ಭೂ ಪರಿವರ್ತನೆ ಮಾಡಿಲ್ಲ' ಎಂದು ಉತ್ತರಿಸಿದ್ದೇನೆ. ಆದರ್ಶ ನಗರ ಎಂದು ಇವರು ಇಷ್ಟು ಕೊಂಡಿದ್ದಾರೆಯೇ ಹೊರತು ಈ ಆದರ್ಶ ನಗರಕ್ಕೆ ಬೇಡಿಕೆ ಬಂದು ನಾವು ಕನ್‌ವರ್ಟ್ ಮಾಡಿಲ್ಲ. Some private man got it converted and he kept this name to that extension.

ಅದಕ್ಕಾಗಿ ಇದರಲ್ಲಿ ಅಕ್ರಮ ಆಗಿದೆ ಅವ್ಯವಹಾರ ಆಗಿದೆ ಎಂದು ಸ್ಪಷ್ಟವಾಗಿ ತಿಳಿಸಿದರೆ ಕನ್‌ವರ್ಷನ್ ಬಗ್ಗೆ ಏನಾದರೂ ಕಾನೂನು ಬಾಹಿರ ರೀತಿ ಕನ್‌ವರ್ಷನ್ ಆಗಿದ್ದರೆ ಅದನ್ನು ಖಂಡಿತವಾಗಿ ಇನ್‌ವೆಸ್ಟಿಗೇಷನ್ ಮಾಡಿಸಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

ಒಂದು ವೇಳೆ ಪಾರ್ಕ್, ರೋಡ್ ಇದ್ದುದನ್ನು ಕೂಡ ಅವರು ತೆಗೆದುಕೊಂಡು ಪ್ಲಾಟ್ಸ್ ಮಾಡಿದ್ದರೆ ಇರ್‌ರೆಗ್ಯುಲಾರಿಟೀಸ್ ಕಮಿಟ್ ಮಾಡಿದ್ದಾರೆ ಅಂದರೆ, ಅದು ಪಂಚಾಯತ್‌ರಾಜ್ ಮಂತ್ರಿಯವರ ವ್ಯಾಪ್ತಿಗೆ ಬರುತ್ತದೆ ಮತ್ತು ಟೌನ್ ಮತ್ತು ಕಂಟ್ರಿ ಪ್ಲಾನಿಂಗ್ ಆಕ್ಟ್‌ನ್ನು ಅವರು ವಯಲೇಟ್ ಮಾಡಿದ್ದರೆ ಅವರ ಮೇಲೆ ಕಾನೂನು ಪ್ರಕಾರವಾದ ಕ್ರಮವನ್ನು ತೆಗೆದುಕೊಳ್ಳಬಹುದು. ಕನ್ವರ್ಶನ್‌ನಲ್ಲಿ ಏನಾದರೂ ವ್ಯತ್ಯಾಸ ಆಗಿದ್ದರೆ ಅಥವಾ ಕಾನೂನುಪ್ರಕಾರ ಕನ್ವರ್ಶನ್ ಆಗಿಲ್ಲ ಎಂಬುದನ್ನು ಅವರು ನನ್ನ ಗಮನಕ್ಕೆ ತಂದಿದ್ದರೆ, ಯಾವುದೇ ಅಧಿಕಾರಿ ತಪ್ಪು ಮಾಡಿದ್ದರೆ ಅವರು ಶಿಕ್ಷೆಗೆ ಗುರಿಯಾಗುತ್ತಾರೆ. ಈ ಮಾತನ್ನು ನಾನು ಸ್ಪಷ್ಟವಾಗಿ ಬಹಿರಂಗಪಡಿಸುತ್ತೇನೆ. ಅದನ್ನು ಬಿಟ್ಟು ನೀವು ಏನೋ ತಪ್ಪು ಮಾಡಿದ್ದೀರಿ, ಸಚಿವರು ಕೊಟ್ಟ ಉತ್ತರ ಸರಿಯಾಗಿಲ್ಲ, ಡಿಫೆಂಡ್ ಮಾಡುತ್ತಿದ್ದೀರಿ ಅಂದರೆ ಏನರ್ಥ? ಇಲ್ಲಿ ಯಾರನ್ನೇ ಆಗಲಿ ಡಿಫೆಂಡ್ ಮಾಡತಕ್ಕಂಥ ಯಾವ ಸಂದರ್ಭವೂ ಇಲ್ಲ. ಒಂದು ವೇಳೆ ಮಾನ್ಯ ಅಧ್ಯಕ್ಷರು ಹೇಳಿದರೆ ಆ ಕುರಿತು ಎನ್‌ಕ್ವೈರಿ ಮಾಡಿಸಿ ಅವರ ವರದಿಯನ್ನು ಬೇಕಾದರೆ ಸದನದ ಮುಂದೆ ಇಡುತ್ತೇನೆ.

ಶ್ರೀ ಅಂಜನಮೂರ್ತಿ : ಆ ಪ್ರದೇಶದಲ್ಲಿ ಒಂದು ಸೈಟ್ 50-80 ಸಾವಿರ ರೂಪಾಯಿಗಳವರೆಗೆ ಮಾರಾಟ ಮಾಡುವಷ್ಟರ ಬೆಲೆ ಉಳ್ಳದ್ದಾಗಿದೆ. ಆದರೆ ಅದನ್ನು ರಿಜಿಸ್ಟರ್ ಮಾಡಿಸುವಾಗ 15ರಿಂದ 20 ಸಾವಿರ ರೂಪಾಯಿಗಳವರೆಗೆ ಮಾತ್ರ ನೋಂದಾವಣೆ ಮಾಡಿ ರಿಜಿಸ್ಟರ್ ಮಾಡಿಸುತ್ತಿದ್ದಾರೆ. ಇದರಲ್ಲಿ ಪಂಚಾಯತ್ ಸೆಕ್ರೆಟರಿ ಮತ್ತಿತರು ಸೇರಿದ್ದಾರೆ. ಅಲ್ಲಿ ಸಿಎ ಸೈಟ್‌ಗಳಿಗಾಗಿ ಬಿಟ್ಟಿರುವುದನ್ನು ಕೂಡ ಬೇರೆಯವರ ಹೆಸರಲ್ಲಿ ಖಾತೆ ಮಾಡಿಬಿಟ್ಟುಕೊಟ್ಟಿದ್ದಾರೆ. ಆದುದರಿಂದ ತಾವುಗಳು ದಯಮಾಡಿ ಈ ಬಗ್ಗೆ ಸಿಓಡಿ ತನಿಖೆ ಮಾಡಿಸಬೇಕಾಗಿ ವಿನಂತಿಮಾಡುತ್ತೇನೆ.

ಅಧ್ಯಕ್ಷರು : ತಾವುಗಳು ವಿಷಯವನ್ನು ಬರೆದು ಕಳುಹಿಸಿಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಎಂ. ಖರ್ಗೆ : ಕನ್ವರ್ಶನ್ ಬಗ್ಗೆ ಏನಾದರೂ ಹೇಳಿದರೆ, ಮಂಡಲಪಂಚಾಯತ್‌ನವರು ಅದನ್ನು ಇರೆಗ್ಯುಲಾರಿಟೀಸ್ ಕಮಿಟ್ ಮಾಡಿದ್ದರೆ, ಅಥವಾ ಇನ್ನೇನಾದರೂ ಅಕ್ರಮ ಮಾಡಿದ್ದರೆ ಅದನ್ನು ಆರ್.ಡಿ.ಪಿ. ಮಂತ್ರಿಯವರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಸಚಿವರು ಉತ್ತರ ಕೊಡುವುದರಲ್ಲಿ ಪ್ರೊಸೀಜರ್ ಪ್ರಕಾರ ಸರಿಯಾಗಿಯೇ ಕೊಟ್ಟಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳುತ್ತಿರುವುದು ಓನರ್ಸ್‌ಲ್ಯಾಂಡನ್ನು ಅವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು.

ಅಧ್ಯಕ್ಷರು : ಹಾಗೇನಾದರೂ ಆಗಿದ್ದರೆ ಅದನ್ನು ನೋಡಿಸುತ್ತೇನೆ ಎಂದು ಸಚಿವರು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಎನ್‌ಕ್ರೋಚ್‌ಮೆಂಟ್ ಇತ್ಯಾದಿ ದುರುಪಯೋಗಗಳು ಆಗಿದ್ದರೆ ಡಿಸಿ ಅವರ ಮೂಲಕ ತನಿಖೆ ಮಾಡಿಸುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಸದಸ್ಯರು ಆ ವಿಚಾರಗಳ ಬಗ್ಗೆ ಜವಾಬ್ದಾರಿಯನ್ನು ತಾನು ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಎನ್‌ಕ್ವೈಯರಿ ಮಾಡಿಸುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆ ಬಗ್ಗೆ ಕಾಂಪ್ರಹೆನ್ಸಿವ್ ರಿಪ್ಲೈಯನ್ನು ಕೊಟ್ಟಿದ್ದಾರೆ. ಆದುದರಿಂದ ಎಲ್ಲಿ ಎನ್‌ಕ್ರೋಚ್ ಮಾಡಿದ್ದಾರೆ ಎಂಬ ಬಗ್ಗೆ ಬರೆದು ಕಳುಹಿಸಿದರೆ ಅದರ ಬಗ್ಗೆ ಎನ್‌ಕ್ವಯರಿ ಮಾಡಿಸುತ್ತೇನೆಂದು ಕೂಡ ಹೇಳಿದ್ದಾರೆ. ಆ ಬಗ್ಗೆ ಅವರು ಒಂದು ತೀರ್ಮಾನ ಮಾಡುತ್ತಾರೆ.

ಗುಲ್ಬರ್ಗ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಬೆಳೆಗಳು ನಾಶವಾಗಿರುವುದು

1235 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಖಾರೀಫ್ ಬೆಳೆಗಳು ಹಾಗೂ ರಾಬಿ ಬೆಳೆಗಳು ನಾಶವಾಗಿ ಅದರಲ್ಲಿ ಮುಖ್ಯ ಬೆಳೆಯಾದ ತೊಗರೀಬೇಳೆ ಒಣಗಿಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೂ ಉಳಿದ ಬೆಳೆಗಳಿಗಾಗಿ ಕ್ರಿಮಿನಾಶಕ ಇತ್ಯಾದಿ ಔಷಧಿಗಳನ್ನು ಸಿಂಪಡಿಸಿದರೆ ಅವುಗಳು ಪೂರ್ತಿ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಕೃಷಿ ಮತ್ತು ತೋಟಗಾರಿಕಾ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಮುಂಗಾರು ಮತ್ತು ಹಿಂಗಾರು ಬೆಳೆಗಳು ಹಾಗೂ ಮುಖ್ಯ ಬೆಳೆಯಾದ ತೊಗರಿ ಬೆಳೆಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹಾಗೂ ಕ್ರಿಮಿನಾಶಕಗಳನ್ನು ಸಿಂಪಡಿಸಿದ್ದರೂ ಸಹ ಬೆಳಗಳು ಹಾನಿಯಾಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕೆ ಕಾರಣಗಳೇನಂದರೆ :

1) ಮೋಡ ಕವಿದ ಹಾಗೂ ತುಂತುರು ಮಳೆಯ ವಾತಾವರಣವು, ಕೀಟಗಳು ಅತಿ ವೇಗವಾಗಿ ಹೆಚ್ಚಾಗಲು ಅನುಕೂಲಕರವಾಗಿರುವುದು.
2) ರೈತರಿಂದ ಕಡಿಮೆ ಪ್ರಮಾಣದಲ್ಲಿ ಕೀಟನಾಶಕಗಳ ಬಳಕೆ,
3) ಒಂದೇ ರೀತಿಯ ಕ್ರಿಮಿನಾಶಕಗಳ ಸತತ ಬಳಕೆಯಿಂದ ಕೀಟಗಳ ನಿರೋಧ ಶಕ್ತಿ ಹೆಚ್ಚಾಗಿರುವಿಕೆ.